aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Kannada Second Language (Paper 4) Key Answers

EXAM	YEAR	TYPE	SUBJECT
Karnataka Class 10	2027	Answer Key	Kannada

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

Malleshwaram Bengaluru-560003

ಮಾದರಿ ಉತ್ತರಗಳು–ಪತ್ರಿಕೆ–04

MODEL ANSWERS - PAPER-04

ವಿಷಯ : ದ್ವಿತೀಯ ಭಾಷೆ ಕನ್ನಡ

SUBJECT : Second Language Kannada

ಸಮಯ : 3 ಗಂಟೆ — ವಿಷಯ ಸಂಕೇತ : **33K**

ಗರಿಷ್ಠ ಅಂಕಗಳು : **80** — **Subject Code : 33K**

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
I	ಬಹುಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)	4x1=4
1.	**1. ಕನ್ನಡ ವರ್ಣಮಾಲೆಯ ಹ್ರಸ್ವ ಅಕ್ಷರಗಳು ಇವು:** ಎ) ಆ, ಈ, ಊ ಬಿ) ಅ, ಎ, ಒ ಸಿ) ಣ, ನ, ಮ ಡಿ) ಯ, ಶ, ಲ **ಉತ್ತರ :** ಬಿ) ಅ, ಎ, ಒ	
2.	**2. ನಾಮ ಪದಗಳಿಗೆ ಬದಲಾಗಿ ಬಳಸುವ ಪದಗಳಿಗೆ ಹೀಗೆನ್ನುವರು:** ಎ) ಸರ್ವನಾಮ ಬಿ) ನಾಮಪ್ರಕೃತಿ ಸಿ) ಭಾವನಾಮ ಡಿ) ವಿಭಕ್ತಿ **ಉತ್ತರ :** ಎ) ಸರ್ವನಾಮ	
3.	**3. ಇವುಗಳಲ್ಲಿ ಅನ್ಯದೇಶ್ಯ ಪದವಿದು** ಎ) ಮನೆ ಬಿ) ಟಿಕೇಟ್ ಸಿ) ಅರಣ್ಯ ಡಿ) ಕೊಡಲಿ **ಉತ್ತರ :** ಬಿ) ಟಿಕೇಟ್	
4.	**4. ಮೈಕೊಡವಿ ಪದದ ವಿಗ್ರಹ ರೂಪವಿದು** ಎ) ಮೈ + ಕೊಡವಿ ಬಿ) ಮೈಯಿಂದ + ಕೊಡವಿ ಸಿ) ಮೈಯನ್ನು + ಕೊಡವಿ ಡಿ) ಮೈ + ಗೊಡವಿ **ಉತ್ತರ :** ಸಿ) ಮೈಯನ್ನು + ಕೊಡವಿ	
II	ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)	12x1=12
5.	**5. ಯಾವುದು ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಹೇಳಿದ್ದಾರೆ?** **ಉತ್ತರ :** ಕೃಷಿ ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಹೇಳಿದ್ದಾರೆ	
6.	**6. ಪುಟ್ಟರಾಜರು ಓದಲು ಮತ್ತು ಬರೆಯುವ ಸಲುವಾಗಿ ಯಾವ ಲಿಪಿ ಕಲಿತರು?** ಉತ್ತರ : ಪುಟ್ಟರಾಜರು ಓದಲು ಮತ್ತು ಬರೆಯುವ ಸಲುವಾಗಿ ಬ್ರೈಲ್ ಲಿಪಿ ಕಲಿತರು	
7.	**7. ಬಟ್ಟಬಯಲಾಕಾರದಲ್ಲಿ ಗೂಡು ಕಟ್ಟುವ ಪಕ್ಷಿಗಳು ಯಾವುವು?** **ಉತ್ತರ :** ನೀಲಿ ಸಾಮ್ರಾಟ ಮತ್ತು ಪ್ಯಾರಡೈಸ್ ಫ್ಲೈಕ್ಯಾಚರ್ (ಸಗ್ಗದಕ್ಕಿ) ಪಕ್ಷಿಗಳು ಬಟ್ಟಬಯಲಾಕಾರದಲ್ಲಿ ಗೂಡು ಕಟ್ಟುತ್ತವೆ.	
8.	**8. ಶಿವರುದ್ರಪ್ಪನವರು ಹೇಳಿರುವಂತೆ ಶಂತುವಿನ ತಂದೆಯ ಹೆಸರೇನು?** **ಉತ್ತರ :** ಶಿವರುದ್ರಪ್ಪನವರು ಹೇಳಿರುವಂತೆ ಶಂತುವಿನ ತಂದೆಯ ಹೆಸರು ಪ್ರದೀಪ.	

9.	**9. ಮನೆಗಿಂತ ಯಾವುದು ಸೊಗಸು ಎಂದು ಗೋಪಾಲನು ಹೇಳುತ್ತಾನೆ?** ಉತ್ತರ ಃ ಮನೆಗಿಂತ ಬನವೇ ಸೊಗಸು ಎಂದು ಗೋಪಾಲನು ಹೇಳುತ್ತಾನೆ	
10.	**10. ಹಾ,ಮಾ, ನಾಯಕರ ಪ್ರಕಾರ ಮಾನವೀಯ ಸಂಬಂಧ ಯಾವುದನ್ನು ಅಪೇಕ್ಷಿಸುತ್ತದೆ?** ಉತ್ತರ ಃ ಹಾ,ಮಾ, ನಾಯಕರ ಪ್ರಕಾರ ಮಾನವೀಯ ಸಂಬಂಧ ಸೌಜನ್ಯವನ್ನು ಅಪೇಕ್ಷಿಸುತ್ತದೆ.	
11.	**11. ಕವಿ ಬಸವರಾಜ ಸಾದರ ಅವರ ಪ್ರಕಾರ ಬೆಲ್ಲ ಬೇವಿಗೆ ಸೇರಿ ಏನಾಗುತ್ತದೆ?** **ಉತ್ತರ ಃ** ಕವಿ ಬಸವರಾಜ ಸಾದರ ಅವರ ಪ್ರಕಾರ ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚುತ್ತದೆ.	
12.	**12. ಕವಿ ಮಾನವನ ಬದುಕು ಕರ್ಪೂರದಂತೆ ಇರಬೇಕೆಂದು ಏಕೆ ಹೇಳಿದ್ದಾರೆ?** **ಉತ್ತರ ಃ** ರವಿಕಿರಣಗಳಿಗೆ ಇಬ್ಬನಿ ಕರಗುವಂತೆ, ಮಾನವನು ಸಿಡುಕು–ಮಿಡುಕನು ತೊರೆದು ಇಬ್ಬನಿಯಂತೆ ಮಾನವನ ಬದುಕು ಇರಬೇಕು ಎಂದು ಕವಿ ಬಯಸುತ್ತಾರೆ.	
13.	**13. ಸ್ಥಳ ಪುರಾಣದ ಪ್ರಕಾರ ಕುಣಿಗಲ್ ಕೆರೆಯನ್ನು ಕಟ್ಟಿಸಿದ ಚಕ್ರವರ್ತಿ ಯಾರು?** **ಉತ್ತರ :** ಸ್ಥಳ ಪುರಾಣದ ಪ್ರಕಾರ ಕುಣಿಗಲ್ ಕೆರೆಯನ್ನು ಕಟ್ಟಿಸಿದ ಚಕ್ರವರ್ತಿ ಉತ್ತರ ಪ್ರದೇಶದ ನೃಂಗರಾಜ.	
14.	**14. ಸಂತೆಯೊಳಗೆ ಮನೆಯನ್ನು ಮಾಡಿದರೆ ಯಾವುದಕ್ಕೆ ಅಂಜಬಾರದು?** **ಉತ್ತರ ಃ** **ಸಂತೆಯೊಳಗೆ ಮನೆಯನ್ನು ಮಾಡಿದರೆ ಶಬ್ದಕ್ಕೆ ಅಂಜಬಾರದು**	
15.	**15. ವೇದಾಂತವನ್ನು ಓದಿದವನು ಹೇಗಿರಬೇಕೆಂದು ಸಿದ್ದರಾಮ ಹೇಳುತ್ತಾನೆ?** ಉತ್ತರಃ ವೇದಾಂತವನ್ನು ಓದಿದವನು ಬ್ರಹ್ಮ ತಾನಾಗಬೇಕು ಎಂದು ಸಿದ್ಧರಾಮ ಹೇಳುತ್ತಾರೆ.	
16.	**16. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ?** **ಉತ್ತರ ಃ** ಉತ್ತರನು ವಿಶಾಲವಾದ ಕೌರವನ ಸೈನ್ಯವನ್ನು ನೋಡಿ ಹೆದರಿ ಜೀವ ಭಯದಿಂದ ನಿಟ್ಟೋಟದಲ್ಲಿ ಓಡಿದನು.	

III	**ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು.** **(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು)**	8x2=16
17.	**17. ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು?** **ಉತ್ತರ ಃ** ಸರ್ವಜ್ಞ ಕವಿಯು ಕೃಷಿಯನ್ನು ಕುರಿತು "ಕೋಟಿವಿದ್ಯಗಳಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೇ ಕೆಡಗುಂ" ಎಂದಿರುವುದು ಗಮನಾರ್ಹ. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಅಂದರೆ ವ್ಯವಸಾಯವೇ ಮೇಲು. ಆ ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಕೃಷಿಯ ಮಹತ್ವವನ್ನು ತಿಳಿಸಿದ್ದಾರೆ.	
18.	**18. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ?** **ಉತ್ತರಃ** ಹಕ್ಕಿಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ, ಕಾವು, ಗುಟುಕು ಪಡೆದು ಜೀವ ಕಣ್ತೆರೆಯುವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ, ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆಯಿದೆ. ಈ ಎಲ್ಲಾ ಬದುಕಿನ ಅನುಭವಗಳು ಹಕ್ಕಿಗೂಡಿನಲ್ಲಿದೆ.	

19. **19. ಭಾರತದ ಏಳು ಪ್ರಾಚೀನ ಪವಿತ್ರ ನಗರಗಳು ಯಾವುವು?**

ಉತ್ತರ :

ಭಾರತದ ಪ್ರಾಚೀನ ಪವಿತ್ರ ನಗರಗಳು ಯಾವುವು ಎಂದರೆ ಅಯೋದ್ಯಾ, ಮಥುರಾ, ಕಾಶಿ, ಮಾಯಾ, ಕಾಂಚಿ, ಅವಂತಿ, ದ್ವಾರಾವತಿ, ಇವೇ ಪುರಾಣೋಕ್ತವಾದ ಪ್ರಾಚೀನ ಏಳು ನಗರಗಳು.

20. **20. ಸಮಾಜ ಜೀವನದ ಪ್ರಧಾನ ಲಕ್ಷಣಗಳಾವುವು?**

ಉತ್ತರ :

ಒಬ್ಬರು ಇನ್ನೊಬ್ಬರ ಬಳಿಗೆ ಹೋಗಬೇಕಾಗಿ ಬರುವುದು ಸಮಾಜ ಜೀವನದ ಪ್ರಧಾನ ಲಕ್ಷಣ. ದೊಡ್ಡ ಬೇಡಿಕೆಯೊಂದಿಗೆ ಹೋಗಬಹುದು; ಚಿಕ್ಕ ಕೋರಿಕೆಯೊಂದಿಗೆ ಹೋಗಬಹುದು. ಸ್ವಾರ್ಥಕ್ಕಾಗಿ ಹೋಗಬಹುದು, ಕರ್ತವ್ಯ ನಿರ್ವಹಣೆಗಾಗಿ ಹೋಗಬಹುದು. ಉದಾಹರಣೆಗೆ ಅಂಗಡಿಗೆ ಗ್ರಾಹಕರು, ರೋಗಿಗಳು ವೈದ್ಯರ ಬಳಿಗೆ, ಕಕ್ಷಿದಾರರು ವಕೀಲರಲ್ಲಿಗೆ, ಜನರು ಅಧಿಕಾರಿಗಳ ಬಳಿ ಹೋಗುತ್ತಾರೆ. ಮತ್ತು ಟಿಕೇಟ್ ಕೇಳಲು ಕಂಡಕ್ಟರ್ ಬಳಿಗೆ, ದೂರು ಕೊಡಲು ಪೊಲೀಸರ ಬಳಿ ಹೋಗುತ್ತಾರೆ. ಹಾಗೇ ಬಟ್ಟೆ ಹೊಲಿಸಿಕೊಳ್ಳಲು ದರ್ಜಿಯ ಹತ್ತಿರ ಹೋಗಬೇಕು. ಇದು ಸಮಾಜದ ಪ್ರಧಾನ ಲಕ್ಷಣವಾಗಿದೆ.

21. **21. ಬೊಬ್ಬೆ ಹೊಡೆದಾವೆ ಬಾಳೆ ಮೀನು ಈ ಸಾಲಿನ ಅರ್ಥವನ್ನು ವಿವರಿಸಿ.**

ಉತ್ತರ :

ಕುಣಿಗಲ್ ಕೆರೆಯು ಅಲ್ಲಿಯ ಜನರ ಉಪ ಕಸುಬಾದ ಮೀನುಗಾರಿಕೆ ಆಶ್ರಯತಾಣವಾಗಿದೆ. ಜನರು ಮೀನುಗಳನ್ನು ಹಿಡಿಯಲು ಕೆರೆಯಲ್ಲಿ ಬಲೆಗಳನ್ನು ಹಾಕುತ್ತಾರೆ. ಬಲೆಗಳನ್ನು ನೀರಿನಿಂದ ಮೇಲಕ್ಕೆ ಎತ್ತಿದಾಗ ಬಲೆಯಲ್ಲಿ ಸಿಕ್ಕಿಕೊಂಡ ಮೀನುಗಳು ನೆಗೆದಾಡುತ್ತವೆ. ಇದನ್ನು ಜನಪದರು ಬೊಬ್ಬೆ ಹೊಡೆದಾವೆ ಬಾಳೆಮೀನು ಎಂದು ವರ್ಣಿಸಿದ್ದಾರೆ.

22. **22. ವೇಷ ಆಚರಣೆಯ ಬಗ್ಗೆ ಸಿದ್ಧರಾಮರ ಚಿಂತನೆಯನ್ನು ತಿಳಿಸಿ.**

ಉತ್ತರ :

ಸಿದ್ಧರಾಮರು ಈ ವಚನದ ಮೂಲಕ ಮನುಷ್ಯನ ನಡೆ–ನುಡಿಗಳು ಒಂದಾಗಿರಬೇಕು. ಎಂಬುದನ್ನು ಅನೇಕ ಉದಾಹರಣೆಗಳ ಮೂಲಕ ತಿಳಿದ್ದಾರೆ. ವೇಷ ಧರಿಸಿದ ಮೇಲೆ ವೇಷದಂತೆ ಆಚರಣೆ ಇರಬೇಕು. ಇಲ್ಲದೆ ಹೋದರೆ ವೇಷಕ್ಕೂ ಆಚರಣೆಗೂ ಸಂಬಂಧವೇ ಇರುವುದಿಲ್ಲ. ವೇದಗಳನ್ನು ಅಧ್ಯಯನ ಮಾಡಿದ ಮೇಲೆ ಅದರಲ್ಲಿರುವ ಮೌಲ್ಯಗಳನ್ನು ತಿಳಿದು ಜೀವನದಲ್ಲಿ ಅಳವಡಿಸಿಕೊಂಡು ಜ್ಞಾನಿಯಾಗಬೇಕು. ಇಲ್ಲದಿದ್ದರೆ ಜೀವನ ವ್ಯರ್ಥವಾಗುತ್ತದೆ. ಕೆರೆಗಳನ್ನು ತೋಡಿದ ಮೇಲೆ ಅದರಲ್ಲಿ ನೀರು (ಪುಣ್ಯತೀರ್ಥ) ಬರದೆ ಹೋದರೆ ಕೆರೆಗಳನ್ನು ತೋಡಿದ್ದು ವ್ಯರ್ಥವೆನಿಸುತ್ತದೆ. ಆದ್ದರಿಂದ ನಮ್ಮ ನಡೆನುಡಿಗಳು ಒಂದಾಗಿರಬೇಕೆಂದು ಸಿದ್ಧರಾಮರು ತಿಳಿಸಿದ್ದಾರೆ.

23. **23. ವೈದ್ಯರ ಮನೆಯಿಂದ ಕಳವಾಗಿ ವಸ್ತುಗಳು ಮರಳಿ ಸಿಕ್ಕಿದ ಬಗೆಯನ್ನು ತಿಳಿಸಿ.**

ಉತ್ತರ :

ಕಳ್ಳರು ವೈದ್ಯರ ಮನೆಗೆ ಬಂದು ತಮ್ಮ ಹಟ್ಟಿಗೆ ಬಂದು ಭೀಮನಾಯಕನ ಮಗನನ್ನು ಉಪಚರಿಸಬೇಕು ಎಂದು ಕೇಳಿದರು. ಇವರು ಕಳ್ಳರು ಎಂಬುದು ಗೊತ್ತಿದ್ದರೂ ಜೀವಭಯವನ್ನು ಲೆಕ್ಕಿಸದೆ ಅವರೊಂದಿಗೆ ಹೋಗಿ ಭೀಮನಾಯಕನ ಮಗನನ್ನು ಉಪಚರಿಸಿ ಅವನ ಪ್ರಾಣವನ್ನು ಉಳಿಸಿದರು. ಇದರಿಂದ ಕಳ್ಳರ ಮನಃ ಪರಿವರ್ತನೆಯಾಯಿತು. ಕೃತಜ್ಞತೆಯಿಂದ ವೈದ್ಯರ ಮನೆಯಿಂದ ಕಳ್ಳತನ ಮಾಡಿದ ವಸ್ತುಗಳನ್ನು ಮರಳಿ ವೈದ್ಯರಿಗೆ ಒಪ್ಪಿಸಿದರು.

24. **24. ಕನ್ನಡಿಗರ ಕಾವ್ಯ ರಚನಾ ಶೈಲಿಯನ್ನು ಕವಿಯು ಹೇಗೆ ವರ್ಣಿಸಿದ್ದಾನೆ?**

ಉತ್ತರ :

ಕನ್ನಡ ನಾಡಿನ ಜನರು ಹೇಳ ಬಯಸಿದ್ದನ್ನು ಹದವಾಗಿ ಹೇಳುತ್ತಾರೆ. ಹದವಾಗಿ ಹೇಳಿರುವುದನ್ನು ಶೋಧಿಸಿ ನೋಡುವ ಚತುರರು ಆಗಿದ್ದಾರೆ. ಉದ್ದೇಶ ಪೂರ್ವಕವಾಗಿ ಓದದಿದ್ದರೂ ಕಾವ್ಯ ಪ್ರಯೋಗ ಮಾಡುವಷ್ಟು ಪರಿಣಿತಿಯನ್ನು ಹೊಂದಿದ್ದಾರೆ ಎಂದು ಕವಿರಾಜಮಾರ್ಗಕಾರನು ಕನ್ನಡಿಗರ ಕಾವ್ಯ ರಚನಾ ಶೈಲಿಯನ್ನು ಕುರಿತು ವರ್ಣಿಸಿದ್ದಾರೆ.

IV	ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು: ಜನ್ಮಸ್ಥಳ, ಕಾಲ ಕೃತಿಗಳು, ಪ್ರಶಸ್ತಿಗಳು ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ ಒಟ್ಟು	3x1=3 1 ಅಂಕ 1 ಅಂಕ 1 ಅಂಕ 3 ಅಂಕಗಳು
25.	**25. ರಮೇಶಗೌಡ ಎಂ ಕೆ** **ಉತ್ತರ :** ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ಅವರು ಧಾರವಾಡ ಜಿಲ್ಲೆಯ, ನವಲಗುಂದ ತಾಲ್ಲೂಕು, ಕಿತ್ತೂರು ಗ್ರಾಮದಲ್ಲಿ 1975ರಲ್ಲಿ ಜನಿಸಿದರು. ಸರ್ಕಾರಿ ಕಾಲೇಜಿನ ಅಧ್ಯಾಪಕರಾದ ಇವರು ಬರೆದ ಕೃತಿಗಳೆಂದರೆ – ಅಮೃತಕ್ಕೆ ಹಾರಿದ ಗರುಡ, ರೂಪಬಯಲು, ಗಾನಯೋಗಿ ಡಾ.ಪಂ. ಪುಟ್ಟರಾಜ ಕವಿ ಗವಾಯಿಗಳು ಕೃತಿಗಳನ್ನು ಹಾಗೂ ಹಲವು ಲೇಖನಗಳನ್ನು ಬರೆದಿದ್ದಾರೆ. ಇವರಿಗೆ ರತ್ನಾಕರವರ್ಣಿ ಮುದ್ದಣ್ಣ ದತ್ತಿ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 'ವರ್ಷದ ಉತ್ತಮ ಕೃತಿ' ಪ್ರಶಸ್ತಗಳು ಬಂದಿವೆ.	
V	**ಪದ್ಯದ ಸಾರಾಂಶವನ್ನು ವಾಕ್ಯರಪದಲ್ಲಿ ಬರೆಯುವುದು:** ಪಠ್ಯಾಂಶಕ್ಕೆ ಪದ ಬಳಕೆ ಮತ್ತು ಶೈಲಿ ಒಟ್ಟು	3x1=3 1 ಅಂಕ 2 ಅಂಕ 3 ಅಂಕಗಳು
26.	**26. ಕಡೆಗೆ ಹಾಯವು ಕಂಗಳೀಬಲ** **ಗಡಲ ಮನವೀಸಾಡಲಾರದು** **ಪೊಡಲುವಿಡಿದಿರಲೇನ ಕಾಣಲು ಬಾರದದ್ಭುತವ** **ಪೊಡವಿಯೀದುದೊ ಮೋಹರವನಿದ** **ರೊಡನೆ ಕಾದುವನಾವನಾತನೆ** **ಮೃಡನು ಶಿವಶಿವ ಕಾದಿಗೆಲಿಪೆವು ಬಲಕೆ ನಮೊಯೆಂದೆ.** **ಉತ್ತರ :** ಈ ಪದ್ಯಭಾಗವನ್ನು ಕುಮಾರವ್ಯಾಸನ 'ಕರ್ನಾಟಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ' ಕೃತಿಯ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಪಾಂಡವರನ್ನು ಹುಡುಕುವ ಉದ್ದೇಶದಿಂದ ಕೌರವರು ವಿರಾಟ ರಾಜನ ಗೋವುಗಳನ್ನು ಅಪಹರಿಸುತ್ತಾನೆ. ಆಗ ಉತ್ತರಕುಮಾರನು ವಿರಾಟರಾಜನ ಅರಮನೆಯಲ್ಲಿ ಬೃಹನ್ನಳೆಯಾಗಿದ್ದ ಅರ್ಜುನನ್ನು ಸಾರಥಿಯಾಗಿ ಮಾಡಿಕೊಂಡು ರಣರಂಗಕ್ಕೆ ಬಂದಾಗ ಕಣ್ಣು ಹಾಯಿಸಿದಷ್ಟು ಕೊನೆ ಕಾಣದ ಕೌರವನ ಸೇನೆಯನ್ನು ನೋಡಿ ಹೆದರಿ ಈ ಸೇನೆಯೊಡನೆ ಹೋರಾಡಿ ಗೆಲ್ಲುವುದು ನನ್ನಿಂದ ಸಾಧ್ಯವಿಲ್ಲ ಎಂದನು. ಸಮುದ್ರದಂತೆ ವಿಶಾಲವಾಗಿರುವ ಸೈನ್ಯದೊಡನೆ ಶಿವನಿಂದ ಮಾತ್ರ ಯುದ್ಧ ಮಾಡಲು ಸಾಧ್ಯವೆಂದು ಕೌರವನ ಸೇನೆಗೆ ನಮೋ ಎಂದನು. ಇಲ್ಲಿ ಉತ್ತರ ಕುಮಾರನ ಭಯ ಮತ್ತು ಹೇಡಿತನದ ಪ್ರಸಂಗ ಸ್ವಾರಸ್ಯವಾಗಿ	
VI	**ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು:** ಅಲಂಕಾರವನ್ನು ಹೆಸರಿಸುವುದು ಲಕ್ಷಣ ಮತ್ತು ಸಮನ್ವಯಗೊಳಿಸುವುದು ಒಟ್ಟು	**3x1=3** 1 ಅಂಕ 2 ಅಂಕ 3 ಅಂಕಗಳು
27.	**27. 'ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು'** ಅಲಂಕಾರ : ಉಪಮಾಲಂಕಾರ ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುವರು. ಉಪಮೇಯ : – **ನೂರಾರು ದೀಪಗಳು** ಉಪಮಾನ : – **ಬೆಳಕಿನ ಕಸೂತಿ** ಉಪಮಾವಾಚಕ : – **ದಂತೆ** ಸಮಾನ ಧರ್ಮ : – **ಕಾಣುವುದು** ಸಮನ್ವಯತೆ : ಉಪಮೇಯವಾದ **'ನೂರಾರು ದೀಪಗಳನ್ನು'** ಉಪಮಾನವಾದ **'ಬೆಳಕಿನ ಕಸೂತಿ'** **'ದಂತೆ'** ಎಂಬ ಉಪಮಾವಾಚಕದ ಮೂಲಕ **'ಕಾಣುವುದು'** ಎಂಬ ಸಮಾನಧರ್ಮದೊಂದಿಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.	

VII	**ಗಾದೆಯನ್ನು ವಿಸ್ತರಿಸಿ ಬರೆಯುವುದು: (ಯಾವುದಾದರೂ ಒಂದಕ್ಕೆ ಮಾತ್ರ)** ಗಾದೆಯ ಮಹತ್ವದ ವಿವರಣೆ ಉದಾಹರಣೆಯೊಂದಿಗೆ ಅರ್ಥ ವಿವರಣೆ ಭಾಷಾ ಶೈಲಿಗೆ–ಪದಬಂಧಗಳಿಗೆ ಒಟ್ಟು	3x1=3 1 ಅಂಕ 1 ಅಂಕ 1 ಅಂಕ 3 ಅಂಕಗಳು
28	**28. 'ಬೆಳೆಯುವ ಸಿರಿ ಮೊಳಕೆಯಲ್ಲಿ'** **ಅಥವಾ** **'ತುಂಬಿದ ಕೊಡ ತುಳುಕುವುದಿಲ್ಲ'**	
VIII	**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು:** ಕೃತಿ, ಕರ್ತೃ ಮತ್ತು ಪಠ್ಯದ ಹೆಸರು ಯಾರು–ಯಾರಿಗೆ ಸಂದರ್ಭ ಭಾಷಾ ಶೈಲಿ, ಪದಬಂಧಗಳಿಗೆ ಒಟ್ಟು	5x3=15 1 ಅಂಕ 1 ಅಂಕ 1 ಅಂಕ 3ಅಂಕಗಳು
29.	**29. "ಹಲವಾರು ವರ್ಷಗಳಿಂದ ಈ ಮರ ನನಗೆ ಆಶ್ರಯಕೊಟ್ಟಿದೆ"** **ಉತ್ತರ :** ಈ ವಾಕ್ಯವನ್ನು ಅ.ರಾ, ಮಿತ್ರ ಅವರು ಬರೆದಿರುವ ಮಹಾಭಾರತಪಾತ್ರ– ಸಂಗತಿಗಳು ಕೃತಿಯಿಂದ ಆಯ್ದ 'ಬಣ ಮರದ ಗಿಳಿ' ಎಂಬ ಪಾಠದಿಂದ ಆರಿಸಿದೆ. ಈ ಮಾತನ್ನು ಗಿಳಿ ಇಂದ್ರನಿಗೆ ಹೇಳುತ್ತದೆ. ಇಂದ್ರನು ಗಿಳಿಯನ್ನು ಇಂಥ ಒಣಮರದಲ್ಲಿ ಏಕೆ ವಾಸಮಾಡಿತ್ತಿದ್ದೀಯ? ಎಂದು ಕೇಳಿದಾಗ ಗಿಳಿಯು "ಈ ಮರ ನನಗೆ ಹಲವಾರು ವರ್ಷಗಳಿಂದ ಆಶ್ರಯ ನೀಡಿದೆ. ಹಣ್ಣು ಕೊಟ್ಟಿದೆ. ಹಸಿರು ಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ. ದುರದೃಷ್ಟದಿಂದ ಮರವನ್ನು ರೋಗ ಬಡತನಗಳು ಕಿತ್ತು ತಿನ್ನುತ್ತಿವೆ. ಇಂತಹ ಸ್ಥಿತಿಯಲ್ಲಿ ಮರವನ್ನು ಬಿಟ್ಟು ಬೇರೆಕಡೆ ಹೋಗಿ ಕೃತಘ್ನನಾಗಲು ನನಗೆ ಇಷ್ಟವಿಲ್ಲ ಎಂದು ಹೇಳಿತು. ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು. ದುರ್ಭರಗಳಿಗೆಯಲ್ಲಿಯೂ ಅವರೊಡನಿದ್ದು ಉಪಕಾರ ಸ್ಮರಣೆ ಮಾಡಬೇಕು. ಅದಕ್ಕೂ ಒಳ್ಳಯ ದಿನ ಬರಲಿ ಎಂದು ಹಾರೈಸಬೇಕು ಎಂದು ತನ್ನ ತತ್ವನಿಷ್ಠೆಯನ್ನು ತಿಳಿಸಿತು. ಇಲ್ಲಿ ಗಿಳಿಯ ತತ್ವನಿಷ್ಠೆ ಮೆಚ್ಚುವಂತದ್ದಾಗಿದೆ.	
30.	**30. "ನನ್ನ ಕಾಫೀ ಕೂಡ ಚೆನ್ನಾಗಿರುತ್ತದೆ"** **ಉತ್ತರ :** ಈ ಮಾತನ್ನು ಗುರುರಾಜ ಕರ್ಜಗಿಯವರ 'ಕರುಣಾಳು ಬಾ ಬೆಳಕೆ' ಅಂಕಣ ಬರೆಹದಿಂದ ಆರಿಸಲಾದ 'ಕಾಫೀ ಕಪ್ಪು' ಎಂಬ ಗದ್ಯ ಪಾಠದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಹೆಡ್‌ಮಾಸ್ತರರು ಹಳೆಯ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ಹೆಡ್‌ಮಾಸ್ತರರ ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ಅಲ್ಲಲ್ಲಿ ಕೂರಿಸಿ ಮಾತನಾಡುತ್ತಿದ್ದರು. ಆಗ ಆ ಹಿರಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿರುವಾಗ ಹೆಡ್‌ಮಾಸ್ತರರು "ಮಕ್ಕಳೇ ಒಂದು ಐದು ನಿಮಿಷ ಇರಿ. ನಿಮಗೆಲ್ಲಾ ಒಳ್ಳೆಯ ಕಾಫೀ ಮಾಡಿ ಕೊಂಡು ಬರುತ್ತೇನೆ. ನನ್ನ ಹೆಂಡತಿ ಹೋಗಿ ಕೆಲವರ್ಷವಾಯಿತು. ಆದರೆ ನನ್ನ ಕಾಫೀ ಕೂಡ ತುಂಬಾ ಚೆನ್ನಾಗಿರುತ್ತದೆ" ಎಂದು ಜೋರಾಗಿ ನಗುತ್ತಾ ಅಡುಗೆ ಮನೆಗೆ ಹೋದರು. ಇಲ್ಲಿ ಗುರು–ಶಿಷ್ಯರ ನಡುವಿನ ಅವಿನಾಭಾವ ಸಂಬಂಧ ಸ್ವಾರಸ್ಯಕರವಾಗಿ ಅಭಿವ್ಯಕ್ತವಾಗಿದೆ	
31.	**31. "ಆ ಮಗುವಿಗೆ ಬಡತನದ ಬವಣೆಯೇಕೆ?** **ಉತ್ತರ :** ಈ ವಾಕ್ಯವನ್ನು ಕುವೆಂಪುರವರ ಬರೆದಿರುವ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ ಆ ಮಾತನ್ನು ಗೋಪಾಲನ ತಾಯಿ ತನ್ನ ಮನಸ್ಸಿನಲ್ಲೇ ಹೇಳಿಕೊಳ್ಳುತ್ತಾಳೆ. ತನ್ನ ಮಗ ಗೋಪಾಲನು ತನ್ನನ್ನು ಶಾಲೆಯಿಂದ ಕರೆತರಲು ಬೇರೆಯವರಂತೆ ಒಬ್ಬ ಆಳು ಬೇಕು ಹಾಗೂ ನನಗೊಂದು ಹೊಸ ಪಂಚೆ ಬೇಕು ಎಂದು ಅಮ್ಮನನ್ನು ಕೇಳುತ್ತಾನೆ ಆಗ ತಾಯಿಯು ಇಲ್ಲಿಯವರೆಗೆ ನಾನು ನನ್ನ ಮಗುವಿಗೆ ಬಡತನದ ಬಗ್ಗೆ ತಿಳಿಯದಂತೆ ಬೆಳೆಸಿದ್ದೇನೆ. ಆದರೆ ಈಗ ನನಗೆ ಇನ್ನು ಮುಂದೆ ತಮ್ಮ ಬಡತನದ ಬಗ್ಗೆ ಮಗುವಿಗೆ ತಿಳಿಸದೇ ಬೇರೆ ದಾರಿ ಇಲ್ಲವಲ್ಲ ಎಂದು ದುಃಖಿಸುತ್ತಾ, ದೇವರ ಮುಂದೆ ಬೇಡುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಇಲ್ಲಿ ಗೋಪಾಲನ ತಾಯಿ ಕಷ್ಟವೇನಿದ್ದರೂ ತನಗೇ ಇರಲಿ, ಮಗುವಿಗೆ ಬೇಡ ಎನ್ನುವ ಮಾತೃವಾತ್ಸಲ್ಯ ಹಾಗೂ ಕಷ್ಟದಲ್ಲೂ ಮಗುವಿಗೆ ವಿದ್ಯೆ	

	ಕೊಡಿಸುವ ಕರ್ತವ್ಯದ ವರ್ಣನೆ ಇಲ್ಲಿ ಸ್ವಾರಸ್ಯವಾಗಿದೆ.	
32.	**32. "ಚಿಲಿಪಿಲಿಯ ಕಲರವಕೆ ಮತ್ತೇರಿದೆ"** ಉತ್ತರ : ಈ ವಾಕ್ಯವನ್ನು 'ಬಸವರಾಜ ಸಾದರ' ಅವರ 'ಸಿಸಿಫಸರ ಸುತ್ತು' ಕವನ ಸಂಕಲದ 'ಸವಿಚೈತ್ರ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಯುಗದ ಆದಿಯಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಂಡಿರುತ್ತಾಳೆ. ಎಲ್ಲಾ ಜೀವಿಗಳಲ್ಲೂ ಹೊಸ ಚೈತನ್ಯ, ಹೊಸ ಉಲ್ಲಾಸ ಒಡಮೂಡಿರುತ್ತದೆ. ಅದನ್ನು ಕವಿ ಜಡತ್ವವನ್ನು ತೊಡೆದು ಹೊಸ ಹುರುಪಿನಿಂದ ತಮ್ಮ ತಮ್ಮ ಕಾರ್ಯದಲ್ಲಿ ತೊಡಗಿವೆ ಎಂದು ಹೇಳಿದ್ದಾರೆ. ಹೊಸ ಹೊಸ ಭಾವನೆಗಳನ್ನು ಹೊಂದಿ ಉತ್ಸಾಹ ಭರಿತವಾಗಿ ಜಗದ ಕಾರ್ಯ ನಡೆದಿದೆ. ಖಗ, ಪಕ್ಷಿ, ಪ್ರಾಣಿಗಳ ಕಲರವದ ವಾಲಗ ಭೂಮಿಯಿಂದ ಆಕಾಶಕ್ಕೆ ತಲುಪಿದಂತೆ ಭಾಸವಾಗುತ್ತಿದೆ ಎಂದು ಯುಗಾದಿಯ ಸಂದರ್ಭವನ್ನು ಕವಿ ಸೊಗಸಾಗಿ ವರ್ಣಿಸಿರುವ ಸ್ವಾರಸ್ಯ ಇಲ್ಲಿ ಅಭಿವ್ಯಕ್ತವಾಗಿದೆ.	
33.	**33. "ಸಿಡುಕು–ಮಿಡುಕನು ತೊರೆದು ಮೌನಿಯಾಗು"** **ಉತ್ತರಃ** ಈ ವಾಕ್ಯವನ್ನು ಸಿ.ಪಿ. ಕೃಷ್ಣಕುಮಾರ್ ಅವರು ರಚಿಸಿದ 'ಬೊಗಸೆ' ಕವನಸಂಕಲನದಿಂದ ಆರಿಸಲಾದ 'ಸದ್ದುಮಾಡದಿರು' ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿಗಳು ಹೇಳಿದ್ದಾರೆ. ಮಾನವ ಅಹಂ ತೊರೆದು ಶಾಂತಿ ಸಹನೆ ಪ್ರೀತಿಗಳಿಂದ ತನ್ನದಾದ ಕರ್ತವ್ಯಗಳನ್ನು ಮೌನವಾಗಿ ಮಾಡಿ ಮುಗಿಸಬೇಕು. ಕೂಗಾಟ ಹಾರಾಟದಿಂದ ಯಾವ ಫಲವೂ ಇಲ್ಲ. ಹಸಿಸೌದೆ ಬುಸುಗುಟ್ಟಿ ದನಿಯನ್ನು ಎತ್ತುತ್ತದೆ ತನ್ನ ಕರ್ತವ್ಯವನ್ನು ಪೂರೈಸುವುದಿಲ್ಲ. ಮದ್ದು ಕಿಡಿ ಸೋಕಿದ ತಕ್ಷಣ ಸಿಡಿದು ಅಬ್ಬರಿಸಿ ನಾಶವಾಗುತ್ತದೆ. ಹೀಗಿರದೆ ಸೂರ್ಯ ಕಿರಣಗಳಿಗೆ ಕರಗುವ ಇಬ್ಬನಿಯಂತೆ ನಮ್ಮ ಕರ್ತವ್ಯಗಳನ್ನು ಮೌನದಲ್ಲಿ ಮಾಡಿ ಮುಗಿಸಬೇಕು. ಸಿಡುಕು ಮಿಡುಕನು ತೊರೆಯಬೇಕು ಎಂದು ಕವಿ ಸಂದೇಶ ನೀಡಿದ್ದಾರೆ. ಇಲ್ಲಿ ಸಾರ್ಥಕ ಜೀವನದ ಮೌಲ್ಯ ಅಭಿವ್ಯಕ್ತಗೊಂಡಿದೆ.	
IX	**ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯುವುದುಃ** **(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)**	1x4=4
34.	**34.** ಏಕಾಂಗಿ – ---------- ---------- ---------- ---------- ---------- ---------- ---------- ---------- ---------- ನಡೆದನು. **ಅಥವಾ** ಕಾಡು ಕಾಡು ---- ---------- ---------- ---------- ---------- ---------- ---------- ---------- ---------- ---------- ---------- ಕಂಡಿತು ಉತ್ತರ : ಏಕಾಂಗಿ ವೀರನಂತೆ ಯುದ್ಧಭೂಮಿಗೆ ಬಿದ್ದನು. ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು. ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು. **ಅಥವಾ** ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು ಕೋಗಿಲೆಯ ಹಾಡೊಂದು ದೂರದಲ್ಲಿ ಕೇಳಿತು ಬೆಳ್ಳಿಚುಕ್ಕಿ ಬಾನಿನಲ್ಲಿ ಅಗತಾನೆ ಬೆಳಗಿತು ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು.	

X	**ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸುವುದು:** ವಿಷಯಾಂಶಕ್ಕೆ ಭಾಷಾಶೈಲಿ, ಪದ ಬಳಕೆಗೆ ಒಟ್ಟು	**1X4=4** 3 ಅಂಕಗಳು 1 ಅಂಕ 4 ಅಂಕಗಳು
35.	**35. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ** **ಅಥವಾ** **ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮೆಚ್ಚುವ ಅಂಶಗಳೊಂದಿಗೆ ವಿವರಿಸಿ** **ಉತ್ತರಃ** ಕವಿ ಗೋಪಾಲಕೃಷ್ಣ ಅಡಿಗರು ಹೇಳಿದಂತೆ ಜೀವನದಲ್ಲಿ ಒಂದೇ ಒಂದು ಹೆಗ್ಗುರಿಯನ್ನು ಇಟ್ಟು ಕೊಂಡು ಅದನ್ನು ಸಾಧಿಸುವುದಕ್ಕಾಗಿ ಹಗಲಿರುಳು ಶ್ರಮಿಸಬೇಕು. ಒಂದು ಬಾಣಕ್ಕೆ ಗುರಿ ಒಂದೇ ಇರುವಂತೆ, ಒಂದು ದೇಹದಲ್ಲಿ ಆತ್ಮ ಒಂದೇ ಇರುವಂತೆ, ಜೀವನಕ್ಕೂ ಒಂದೇ ಗುರಿ ಇರಬೇಕೆಂದು ಹೇಳುತ್ತಾರೆ ನಾವು ಇಟ್ಟುಕೊಂಡ ಗುರಿ ನಮಗೂ, ದೇಶಕ್ಕೂ ಒಳ್ಳಯದನ್ನು ಬಯಸುವಂತಿರಬೇಕು. ಸ್ವಾರ್ಥಿಗಳಾಗಬಾರದು. ಇತರ ಜೀವಿಗಳನ್ನು ಬಳಲಿಸಬಾರದು. ಪ್ರತಿಯೊಬ್ಬ ಮಾನವನಲ್ಲಿ ದೈವತ್ವವನ್ನು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕ್ಕಾಗಿ ಶ್ರಮಿಸಬೇಕು. ಇದುವೇ ಮನುಷ್ಯ ಜೀವನ. ಕಮಲ ಕೆಸರಿನಲ್ಲಿಯೇ ಹುಟ್ಟಿದ್ದರೂ ಮೇಲೆ ಬಾಂದವಳನ್ನು ನೋಡಿ ಸೂರ್ಯನ ಕಿರಣಗಳಿಗೆ ಅರಳಿ ದೇವರ ಮುಡಿ ಸೇರಿ ಜೀವನ ಸಾರ್ಥಕ ಮಾಡಿಕೊಳ್ಳತ್ತದೆ. ಅದೇ ರೀತಿ ಮಾನವನು ಅಚಲವಾದ ಹೆಗ್ಗುರಿಯನ್ನು ಹೊಂದಿ ಅದರ ಸಾಧನೆಗೆ ಹಗಲಿರುಳು ಶ್ರಮಿಸಬೇಕು. ಗುರಿ ಸಾಧನೆಯ ಪಥದಲ್ಲಿ ಯಾವುದೇ ಅಡ್ಡಿ–ಆತಂಕಗಳು ಬಂದರೆ ಅವುಗಳಿಗೆ ಹೆದರದೆ, ಧೃತಿಗೆಡದೆ ಅವುಗಳನ್ನು ಎದುರಿಸಿ ಮುನ್ನಡೆಯಬೇಕು. ಹಾಗೆಯೇ ಮಾನವನು ತನ್ನ ಕೀಳಿರಿಮೆಯನ್ನು ತೊರೆದು, ಜೀವನದ ಧ್ಯೇಯವನ್ನು ಸಾಧಿಸಲು ನಗುತ್ತಾ ಮುನ್ನುಗ್ಗಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ಕವಿ ಹೇಳಿದ್ದಾರೆ. ಅಥವಾ **ಉತ್ತರ.** ಜೀವನಕ್ಕೆ ಒಂದು ಉತ್ತಮವಾದ ಗುರಿ ಇರಬೇಕು ಆಗ ಜೀವನ ಸಾರ್ಥಕತೆ ಹೊಂದುತ್ತದೆ. ಕಮಲ ಕೆಸರೊಳಗೆ ಹುಟ ್ಟಿದರೂ ದೇವರ ಮುಡಿ ಸೇರಿ ಸಾರ್ಥಕತೆ ಪಡೆದುಕೊಳ್ಳುತ್ತದೆ. ರವಿಕಿರಣಗಳಿಗೆ ಮೆರೆದಾಡಿ ವಿಜೃಂಭಿಸುತ್ತದೆ. ಅದೇ ರೀತಿ ನಾವು ಸಹಿತ ಶ್ರೇಷ್ಟವಾದ ಗುರಿಯನ್ನು ತಲುಪಿ ಸಾರ್ಥಕತೆಯನ್ನು ಹೊಂದಬೇಕು. ಗುರಿಯನ್ನು ತಲುಪುವಾಗ ಯಾವುದೇ ಅಡಚಣೆಗಳು, ತೊಂದರೆಗಳು ಎದುರಾದಾಗ ಅವುಗಳಿಗೆ ಹೆದರುವ ಹೇಡಿತನವನ್ನು, ಹೆಣ್ತನವನ್ನು ತೋರಬಾರದು. ಹಿಡಿದ ದಾರಿಯಲ್ಲಿ ಗುರಿಯನ್ನು ತಲುಪಲು ಪೌರುಷದಿಂದ ಮುನ್ನಡೆಯಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ ಇರುತ್ತದೆ. ಆದ್ದರಿಂದ ನಮ್ಮ ಜೀವನಕ್ಕೇಕೆ ಹಲವು ಸಾಧ್ಯಗಳು? ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕೆ ಹಗಲಿರುಳು ಹೋರಾಡಬೇಕು. ನರನೊಳಗೆ ನಾರಯಣನ ರೂಪ, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕಾರ್ಯ ಮಾಡುತ್ತಾ ಜೀವನ ನಡೆಸಬೇಕು ಆಗ ಮನುಷ್ಯ ಜೀವನ ಸಾರ್ಥಕವಾಗುತ್ತದೆ. ಜೀವನದಲ್ಲಿ ಸ್ವಾರ್ಥ ತುಂಬಿದ ಗುರಿಯನ್ನು ಹೊಂದಿದರೆ ಅದು ನಮಗೆ ಅಪಕೀರ್ತಿಯನ್ನು ತರುತ್ತದೆ ಎಂಬುದು ಗುರಿ ಪದ್ಯದ ಸಾರಾಂಶವಾಗಿದೆ.	
XI	**ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು: (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** 36 ಪ್ರಶ್ನೆಗಳು	1x4=4 (2+2)
	ಅ) ಧ್ಯಾನಮಯ ಜೀವನದ ಬಗ್ಗೆ ರಮಣ ಮಹರ್ಷಿಗಳು ಹುಡುಗನಿಗೆ ಹೇಗೆ ಮಾರ್ಗದರ್ಶನ ನೀಡಿದರು? **ಉತ್ತರ ಃ** ಮಹರ್ಷಿಗಳು "ಮಗು ನೀನು ದೋಸೆ ತಿನ್ನುತ್ತಾ ಹೋಗಬೇಕು. ಆದರೆ ನನ್ನ ಬೆರಳನ್ನು ನೋಡುತ್ತಾ ತಿನ್ನಬೇಕು. ನನ್ನ ಎತ್ತಿದ ಬೆರಳು ಮೇಲೆ ಇರುವವರೆಗೂ ತಿನ್ನುತ್ತಲೇ ಇರಬೇಕು ಬೆರಳನ್ನು ಕೆಳಗೆ ಇಳಿಸಿದ ತಕ್ಷಣ ತಿನ್ನುವುದನ್ನು ನಿಲ್ಲಿಸಬೇಕು. ಆಗ ನಿನ್ನ ತಟ್ಟೆಯಲ್ಲಿ ಒಂದು ಚೂರು ದೋಸೆ ಇರಬಾರದು ಎಂದರು. ಹುಡುಗ ತಿನ್ನಲಾರಂಭಿಸಿದ. ಮಹರ್ಷಿಗಳ ಕೈ ಬೆರಳನ್ನು ನೋಡುತ್ತ ವೇಗವಾಗಿ ತನ್ನುತ್ತಿದ್ದ. ಬೆರಳಿನ ವೇಗ ಹೆಚ್ಚಿದಂತೆ ತಿನ್ನುವ ವೇಗವು ಹೆಚ್ಚುತ್ತಿತ್ತು. ಮಹರ್ಷಿಗಳ ಬೆರಳು ಕೇಳಗಿಳಿಯುತ್ತಿದ್ದಂತೆ ಹುಡುಗನು ತಟ್ಟೆಯಲ್ಲಿದ್ದ ದೋಸೆಯನ್ನು ದೊಡ್ಡ ದೊಡ್ಡ ತುತ್ತುಗಳಲ್ಲಿ ತಿಂದು ಮುಗಿಸಿದ. ಆಗ ಮಹರ್ಷಿಗಳು ಅವನ ಬೆನ್ನು ತಟ್ಟಿ ಹೇಳಿದರು. "ಮಗು ಈಗ ನೀನು ಮಾಡಿದ್ದೇ ಧ್ಯಾನ. ತಿನ್ನುವುದನ್ನು ನೀನು ನಿಲ್ಲಿಸಿರಲಿಲ್ಲ ಆದರೆ ನನ್ನ ಬೆರಳಿನ ಮೇಲಿನ ಕಣ್ಣನ್ನು ತೆಗೆದಿರಲಿಲ್ಲ. ಇದೇ ಧ್ಯಾನಮಯ ಜೀವನ ನಮ್ಮ ಕರ್ತವ್ಯ ಮಾಡುತ್ತಲೇ ಇರಬೇಕು. ಆದರೆ ಭಗವಂತನ ಮೇಲಿನ ಚಿಂತನೆಯನ್ನು ಕ್ಷಣವೂ ಬಿಡಬಾರದು" ಎಂದು ಹೇಳಿದರು.	

	ಆ) ರಮಣ ಮಹರ್ಷಿಗಳು ಭಕ್ತರ ಸಮಸ್ಯೆಗಳನ್ನು ಪರಿಹರಿಸುತ್ತಿದ್ದ ಬಗೆಯನ್ನು ತಿಳಿಸಿ. **ಉತ್ತರ :** ಭಗವಾನ್ ರಮಣ ಮಹರ್ಷಿಗಳು ಭಾರತ ದೇಶದ ಆಧ್ಯಾತ್ಮಿಕತೆಯ ಶಿಖರ. ಅತ್ಯಂತ ಸರಳವಾಗಿ, ಎಲ್ಲರಿಗೂ ತಿಳಿಯುವಂತೆ ವೇದಾಂತವನ್ನು ತಿಳಿಸುವುದು ಅವರಿಗೆ ಸುಲಭ ಸಾಧ್ಯವಾಗಿತ್ತು. ಕೆಲವೊಮ್ಮೆ ವಿಶದವಾಗಿ, ಕೆಲವೊಮ್ಮೆ ಸೂಕ್ತಿಗಳಿಂದ, ಕೆಲವೊಮ್ಮೆ ನಿದರ್ಶನಗಳಿಂದ ಮತ್ತೆ ಕೆಲವು ಬಾರಿ ಮೌನದಿಂದ ಭಕ್ತರ ಸಮಸ್ಯೆಗಳಿಗೆ ಸಮರ್ಪಕ ಉತ್ತರ ನೀಡುತ್ತಿದ್ದರು.	
XII	ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ) ಪೀಠಿಕೆ / ಪ್ರಸ್ತಾವನೆ ವಿಷಯ ನಿರೂಪಣೆ ಭಾಷೆಶೈಲಿಗೆ, ಮುಕ್ತಾಯ / ಉಪಸಂಹಾರ	1x4=4 1 ಅಂಕ 2 ಅಂಕಗಳು 1 ಅಂಕ 4 ಅಂಕಗಳು
37.	**37 ಯುದ್ಧದಿಂದಾಗುವ ಪರಿಣಾಮಗಳು** **ಅಥವಾ** **ಭಾರತದ ಅಭಿವೃದ್ಧಿಯಲ್ಲಿ ಕೃಷಿಯ ಮಹತ್ವ**	
XIII	**ಪತ್ರ ಲೇಖನ ಬರೆಯುವುದು: (ಯಾವುದಾದರೂ ಒಂದಕ್ಕೆ ಮಾತ್ರ)** 38. ನೀವು ಉತ್ತರಕನ್ನಡ ಜಿಲ್ಲೆಯ ಚಂದನಪುರದಲ್ಲಿ ವಾಸವಾಗಿರುವ 'ಮೋಹನ' ಎಂದು ಭಾವಿಸಿಕೊಂಡು ನಿಮ್ಮ ಊರಿನಲ್ಲಿ 'ಜಲಜೀವನ್' ಯೋಜನೆಯ ಅಡಿಯಲ್ಲಿ ಗ್ರಾಮದ ಎಲ್ಲಾ ಮನೆಗಳಿಗೂ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡುವಂತೆ ಕೋರಿ, ತಾಲ್ಲೂಕು ಪಂಚಾಯತಿಯ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ **ಅಥವಾ** ನೀವು ಕಾರವಾರದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ 'ರಮ್ಯಾ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಪೋಷಕರ ಸಭೆಗೆ ಬರುವಂತೆ ಕೋರಿ ಧಾರವಾಡದಲ್ಲಿ ವಾಸವಾಗಿರುವ 'ರಮೇಶ' ಎಂಬ ಹೆಸರಿನ ನಿಮ್ಮ ತಂದೆಗೆ ಪತ್ರ ಬರೆಯಿರಿ.	1x5=5
	ವೈಯಕ್ತಿಕ ಪತ್ರ : ಇಂದ ವಿಳಾಸ, ಸ್ಥಳ, ದಿನಾಂಕ ಪ್ರಾರಂಭದ ಒಕ್ಕಣೆ ಪತ್ರದ ಒಡಲು ಸಂಯೊಂದಿಗೆ ಮುಕ್ತಾಯ, ಗೆ ವಿಳಾಸ ವಿನ್ಯಾಸ, ಪದಬಳಕೆ, ಶೈಲಿ ಒಟ್ಟು	1 ಅಂಕ 2 ಅಂಕಗಳು 1 ಅಂಕ 1 ಅಂಕ 5 ಅಂಕಗಳು
	ಅಥವಾ	
	ವ್ಯಾವಹಾರಿಕ ಪತ್ರ : ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ ಪತ್ರದ ಒಡಲು ಸಂಯೊಂದಿಗೆ ಮುಕ್ತಾಯ, ಗೆ ವಿಳಾಸ ವಿನ್ಯಾಸ, ಪದಬಳಕೆ, ಶೈಲಿ ಒಟ್ಟು	1 ಅಂಕ 2 ಅಂಕಗಳು 1 ಅಂಕ 1 ಅಂಕ 5 ಅಂಕಗಳು